ಹೋದ. ಪೋತರಾಜು, ಲಕ್ಷ್ಮಣ, ಚಿಟ್ಟಿಬಾಬು ಇಲ್ಲೇ ಇರುತ್ತಾರಂತೆ ಅಂತ ಹೇಳುತ್ತ ವೆಂಕಟಗಿರಿಯ ಮುಖ ನೋಡಿದ.

★★★


ಮತ್ತೊಂದು ಕ್ರೈಂ ಮೀಟಿಂಗ್ ಆರಂಭವಾಯಿತು. ಕನಕ ದುರ್ಗಾ ಕಾಟನ್ ಮಿಲ್‌ನಲ್ಲಿ ನಡೆದ ಜಗಳದಲ್ಲಿ ಗಾಯಗೊಂಡಿದ್ದವರು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಗಲಾಟೆ ಬಗ್ಗೆ ಎಫ್ಐಆರ್ ಹಾಕಿಲ್ಲ... ಖುದ್ದೂಸ್ ಮರ್ಡರ್ ಕೇಸಿನ ಆರೋಪಿಗಳು ಜುಡಿಷಿಯಲ್ ಕಸ್ಟಡಿಯಲ್ಲಿದ್ದಾರೆ. ಅವರು ಬೇಲ್‌ಗೆ ಅರ್ಜಿ ಹಾಕಲ್ಲವಂತೆ. ಕೊಲೆಗೆ ಹಳೆಯ ದ್ವೇಷ ಕಾರಣ ಅಂತ ಗೊತ್ತಾಗಿದೆ ಅಂತ ಗಾಂಧಿನಗರ ಇನ್‌ಸ್ಪೆಕ್ಟರ್ ವರದಿ ಒಪ್ಪಿಸಿದರು. ಇನ್ನೂ ಕೆಲವರು ತಮ್ಮ ವ್ಯಾಪ್ತಿಯ ಕ್ರೈಂಗಳ ಬಗ್ಗೆ ವರದಿ ಒಪ್ಪಿಸಿದರು.

ಕಡಪಾ, ನಂದ್ಯಾಲದಿಂದ ಇಬ್ಬರು ಡಿವೈಎಸ್‌ಪಿಗಳು, ಅವರ ಜತೆ ಕೆಲವರು ಪೊಲೀಸರು ಬಂದಿದ್ದಾರೆ. ಅವರೆಲ್ಲ ಮಫ್ತಿಯಲ್ಲಿದ್ದಾರೆ. ಒಬ್ಬ ಡಿವೈಎಸ್ಪಿ ಮೊನ್ನೆ ಆಫೀಸಿಗೆ ಬಂದಿದ್ದರು. ಸದ್ಯದಲ್ಲೇ ನಂದ್ಯಾಲದ ಎಸ್‌ಪಿ ಸಾಹೇಬರು ಬಂದು ನಿಮ್ಮನ್ನು ಭೇಟಿ ಆಗ್ತಾರಂತೆ ಅಂತ ಎಸಿಪಿ ಮುತ್ತಣ್ಣ ಸ್ಕೂಲ್ ಮಕ್ಕಳು ಮೇಷ್ಟರ ಎದುರು ಪಾಠ ಒಪ್ಪಿಸುವಂತೆ ಎಸ್‌ಪಿ ಅವರನ್ನೇ ನೋಡುತ್ತ ಹೇಳಿ ಮುಗಿಸಿದರು.

ಮಾರನೆ ದಿನ ಹನ್ನೊಂದರ ಹೊತ್ತಿಗೆ ರಾಘವನ್ ಅವರಿಂದ ಫೋನ್ ಬಂತು. ಮಿಸ್ಟರ್ ಪುರಿ, ಒಂದು ವಾರ ನಾನು ಹೆಡ್ ಕ್ವಾರ್ಟರ್ಸ್‌ನಲ್ಲಿ ಇರಲಿಲ್ಲ. ಡೆಲ್ಲಿಗೆ ಹೋಗಿದ್ದೆ. ಆನ್ ಡ್ಯೂಟಿ ಮೇಲೆ. ಡೆಲ್ಲಿ ಪೊಲೀಸ್ ಅಕಾಡೆಮಿಯಲ್ಲಿ ಒಂದು ಸೆಮಿನಾರ್ ಇತ್ತು. ಇವತ್ತು ಬೆಳಿಗ್ಗೆ ಬಂದೆ... ಆಫೀಸಿಗೆ ಬಂದ ಮೇಲೆ ಗೊತ್ತಾಯಿತು, ನಿಮ್ಮ ಸಿಟಿಯಲ್ಲಿದ್ದ ಕೆಬಿ ಎಸ್ಕೇಪ್ ಆಗಿದ್ದಾನೆ ಅಂತ. ಚಿತ್ತೂರಿನ ಎಸ್‌ಪಿ ಫೋನ್ ಮಾಡಿದ್ದರು. ಕಳೆದ ವಾರ ಅವನು ಚಿತ್ತೂರಿನಲ್ಲಿ ಇದ್ದನಂತೆ. ಅವನು ಇನ್ನೂ ಚಿತ್ತೂರಲ್ಲೇ ಇರಬಹುದು ಅಥವಾ ಬೆಂಗಳೂರಿನ ಕಡೆಗೆ ಹೋಗಿರಬಹುದು...

ನಿಮ್ಮ ಇಂಟೆಲಿಜೆನ್ಸ್ ಫೇಲ್ ಆಗಿದೆ. ವೆಪನ್‌ಗಳು ಇನ್ನೂ ನಿಮ್ಮ ಸಿಟಿಯಲ್ಲೇ ಇವೆ. ಅವು ಹೊರಕ್ಕೆ ಹೋಗಿಲ್ಲ ಅಂತ ಖಚಿತವಾಗಿ ಹೇಳಿದರಲ್ಲದೆ, ಮತ್ತೆ ಫೋನ್ ಮಾತಾಡ್ತೀನಿ ಅನ್ನುತ್ತ ಮಾತು ಮುಗಿಸಿದರು.

ನಮ್ಮ ಇಂಟೆಲಿಜೆನ್ಸ್ ಸರಿ ಇಲ್ಲ... ಏನು ನಡೀತಿದೆ ಅನ್ನೋದೇ ಗೊತ್ತಾಗ್ತ ಇಲ್ಲವಲ್ಲ ಅಂತ ಪೇಚಾಡಿಕೊಳ್ಳುತ್ತಲೇ ಎಸ್‌ಪಿಗೆ ಫೋನ್ ಮಾಡಿದರು. ಈಗಲೇ ಬನ್ನಿ ಅಂತಷ್ಟೇ ಹೇಳಿ ಮಾತು ಮುಗಿಸಿದರು. ಏನು ಮಾಡಬೇಕು ಅನ್ನೋದೇ ಗೊತ್ತಾಗ್ತ ಇಲ್ಲವಲ್ಲ ಅಂತ ಗಟ್ಟಿಯಾಗಿ ಹೇಳಿಕೊಂಡರು. ಎಸ್‌ಪಿಗಾಗಿ ಕಾಯುತ್ತ ಕೂತರು.




**ಪ್ರೇಮಕುಮಾರ್ ಹರಿಯಬ್ಬೆ**

ಹುಟ್ಟೂರು ಚಿತ್ರದುರ್ಗ ಜಿಲ್ಲೆಯ ಹರಿಯಬ್ಬೆ ಗ್ರಾಮ. ಈಗ ಬೆಂಗಳೂರಿನಲ್ಲಿ ವಾಸ. ವೃತ್ತಿಯಿಂದ ಪತ್ರಕರ್ತ. 'ಸತ್ತವರ ಬದುಕು', 'ದೇವ ಕಣಗಿಲೆ' ಸಂಕಲನದ ಕಥೆಗಳೂ ಸೇರಿದಂತೆ 40ಕ್ಕೂ ಹೆಚ್ಚು ಕತೆಗಳು 'ಪ್ರಜಾವಾಣಿ', 'ಸುಧಾ', 'ಮಯೂರ' ಪತ್ರಿಕೆಗಳಲ್ಲಿ ಪ್ರಕಟವಾಗಿವೆ.